ಸಾಕ್ಷಿ ಯನ್ನು ದಿಃ 22.07.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿನಾಂಕ 06.03.1996 ರಂದು ಸೌಭ್ಯಾಗ್ಯಮ್ಮ ರವರು ಅಣ್ಣೇಗೌಡರಿಗೆ ಬರೆದುಕೊಟ್ಟ ಕ್ರಯಪತ್ರವನ್ನು ನಿಪಿ - 1 ಎಂದು,
2. ದಿನಾಂಕಃ 23.06.2012 ರಂದು ಅಣ್ಣೇಗೌಡ ರವರಿಗೆ ರಾಮೇಗೌಡ ರವರು ಬರೆದುಕೊಟ್ಟ ಭೋಗ್ಯ ಬಿಡುಗಡೆ ಪತ್ರದ ಕಂಪ್ಯೂಟರ್ ದೃಢೀಕೃತ ಪ್ರತಿಯನ್ನು ನಿಪಿ - 2 ಎಂದು,
3. ದಿನಾಂಕಃ 20.07.2001 ರಂದು ಅಣ್ಣೇಗೌಡ ರವರು ರಾಮೇಗೌಡರವರಿಗೆ ಬರೆದುಕೊಟ್ಟ ನೊಂದಾಯಿತ ಭೋಗ್ಯ ಪತ್ರವನ್ನು ನಿಪಿ - 3 ಎಂದು,
4. ಉಪವಿಭಾಗಾಧಿಕಾರಿ, ಹುಣಸೂರು ರವರ ಆರ್.ಎ.133/2012-13 ರ ಆದೇಶದ ದೃಢೀಕೃತ ಪ್ರತಿಯನ್ನು ನಿಪಿ - 4 ಎಂದು,
5. ನಂದಿಪುರ ಗ್ರಾಮದ ಎಂ.ಆರ್.38/1995-96 ರ ಮ್ಯುಟೇಶನ್ ರಿಜಿಸ್ಟರ್ನ ದೃಢಿಕೃತ ನಕಲನ್ನು ನಿಪಿ - 5 ಎಂದು,
6. ನಂದೀಪುರ ಗ್ರಾಮದ ಸ.ನಂ.44/1 ಕ್ಕೆ ಸಂಬಂಧಿಸಿದ ದಿಃ 01.04.1984 ರಿಂದ 07.11.1997 ರ ವರೆಗಿನ ಋಣಭಾರ ಪ್ರಮಾಣ ಪತ್ರವನ್ನು ನಿಪಿ - 6 ಎಂದು,
7. ನಂದೀಪುರ ಗ್ರಾಮದ ಎಂ.ಆರ್.ನಂ.70/2005-06 ರ ಮ್ಯುಟೇಶನ್ ಪ್ರತಿಯನ್ನು ನಿಪಿ - 7 ಎಂದು ಗುರುತಿಸಲಾಯಿತು.